

# 500ರ ಹರೆಯದ ಏಂಜೆಲ್ ಓಕ್!

ದಕ್ಷಿಣ ಕೊರಿಯಾದ ಚಾರ್ಲ್ಸ್‌ಟನ್ ನಲ್ಲಿರುವ ಏಂಜೆಲ್ ಓಕ್ ಮರವಿದು. ಈ ಮರಕ್ಕೆ ಈಗ ಬರೋಬ್ಬರಿ 500 ವರ್ಷ ಪ್ರಾಯ. ಮಿಸಿಸಿಪ್ಪಿ ನದಿಯ ಪೂರ್ವ ಭಾಗದಲ್ಲಿದೆ ಇ ದೈತ್ಯ ಮರ. ಸುಮಾರು 65 ಅಡಿ ಎತ್ತರ, 28 ಅಡಿ ಸುತ್ತಳತೆ ಹಾಗೂ 17 ಸಾವಿರ ಚದರ ಅಡಿಯಲ್ಲಿ ಹರಡಿದೆ ಈ ಮರರ ರೆಂಬೆಗಳು. ಇದರ ಒಂದು ಕೊಂಬೆ 187 ಅಡಿ ಉದ್ದವಿದೆ.

ಈ ಮರದಿಂದಾಗಿ ಈ ಭಾಗ ಹಲವಾರು ಪ್ರವಾಹ, ಭೂಕಂಪ, ಚಂಡಮಾರುತಗಳಿಂದ ರಕ್ಷಿಸಲ್ಪಟ್ಟಿದೆ. ಆದರೆ 1989ರಲ್ಲಿ ಬಂದ ಸುಂಟರಗಾಳಿ 'ಹ್ಯೂಗೊ'ದಿಂದಾಗಿ ಈ ಮರಕ್ಕೆ ಭಾಗಶಃ ಹಾನಿಯಾಗಿತ್ತು. ಆದರೂ ಇದು ಬೆಳೆಯುತ್ತಲೇ ಇದೆ. ಈ ಮರದ ಮೂಲ ಸೋಸ್ಟಲ್ ಕ್ಯಾರೊಲಿನ. ಈ ಮರ ಎತ್ತರೆತ್ತರ ಬೆಳೆಯುವ ಬದಲಿಗೆ ಅಗಲವಾಗಿ ಹರಡಿ ಬೆಳೆಯುತ್ತದೆ. ಇದೀಗ ಚಾರ್ಲ್ಸ್‌ಟನ್ ನಗರದ ವೃಕ್ಷ ಸಂಪತ್ತು.

■ ಯು.ಅನಂತ್

